## ನಕ್ಕು ಬಿಡಿ



ಒಬ್ಬಾಕೆ ದಢೂತಿ ಮಹಿಳೆ ಕಳ್ಳನನ್ನು ಹಿಡಿದು ಆತನ ಮೇಲೆಯೇ ಕೂತುಬಿಟ್ಟಳು. ಆನಂತರ ಕೆಲಸದಾಳನ್ನು ಕರೆದು ಪೊಲೀಸರನ್ನು ಕರೆತರಲು ತಿಳಿಸಿದಳು.

ಆಳು: ಸರಿ ಮೇಡಮ್, ಆದರೆ... ನನ್ನ ಚಪ್ಪಲಿ ಕಾಣಿಸುತ್ತಿಲ್ಲ...

ಕಳ್ಳ: ಬಾಗಿಲಲ್ಲಿ ನನ್ನ ಚಪ್ಪಲಿಗಳಿವೆ, ಅವನ್ನು ಧರಿಸಿ ಬೇಗ ಹೋಗಯ್ಯಾ...!

★★★

ಸರಕಾರಿ ನೌಕರಿಯಲ್ಲಿರುವ ದಂಪತಿಯ ನಡುವೆ ಭೀಕರ ಜಗಳವುಂಟಾಯಿತು.

ಪತಿ: ನಾನು ಪತಿಯ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆ...

ಪತ್ನಿ: ಸರಿ ಸರಿ... ಆದರೆ ಪರ್ಯಾಯ ವ್ಯವಸ್ಥೆ ಆಗುವವರೆಗೂ ಹುದ್ದೆಯಲ್ಲಿರತಕ್ಕದ್ದು!

★★★

ದೈನಿಕವೊಂದರ ವೈವಾಹಿಕ ಅಂಕಣದ ಇತ್ತೀಚಿನ ಜಾಹೀರಾತು.

‘ಬೆಸ ಸಂಖ್ಯೆಯ ಕಾರು ಹೊಂದಿರುವ, ಸರಕಾರಿ ನೌಕರಿಯಲ್ಲಿರುವ 28ರ ಹರೆಯದ ವಿದ್ಯಾವಂತ ಯುವಕನೋರ್ವನಿಗೆ ಸರಿ ಸಂಖ್ಯೆಯ ಕಾರುಳ್ಳ ಸುಂದರ ವಧು ಬೇಕಾಗಿದೆ. ಸೂಕ್ತ ಅಭ್ಯರ್ಥಿಗಳು ದಯವಿಟ್ಟು ತಮ್ಮ ಕಾರಿನ ಭಾವಚಿತ್ರ ಹಾಗೂ ನೋಂದಣಿ ಪತ್ರದ ಜೊತೆ ಸಂಪರ್ಕಿಸಬೇಕಾಗಿ ಕೋರಲಾಗಿದೆ.’

★★★

ವಾಗ್ಯುದ್ಧದ ಬಳಿಕ ಪತ್ನಿ ತನ್ನ ಸಾಮಾನುಗಳನ್ನು ಪ್ಯಾಕ್ ಮಾಡುತ್ತಿದ್ದಳು...

ಪತಿ: ಎಲ್ಲಿಗೆ ಹೊರಟಿರುವೆ?

ಪತ್ನಿ: ನನ್ನಮ್ಮನ ಮನೆಗೆ

ಪತಿ ಕೂಡ ತನ್ನ ಸಾಮಾನುಗಳನ್ನು ಪ್ಯಾಕ್ ಮಾಡತೊಡಗಿದನು.

ಪತ್ನಿ: ಈಗ ನೀವೆಲ್ಲಿಗೆ ಹೊರಟಿರುವಿರಿ?

ಪತಿ: ನನ್ನಮ್ಮನ ಮನೆಗೆ

ಪತ್ನಿ: ಹಾಗಿದ್ದರೆ ಮಕ್ಕಳ ಕಥೆಯೇನು?

ಪತಿ: ನೀನು ನಿನ್ನಮ್ಮನಲ್ಲಿಗೆ ಮತ್ತು ನಾನು ನನ್ನಮ್ಮನಲ್ಲಿಗೆ ಹೊರಟಿರುವಾಗ... ನಿಯಮ ಪ್ರಕಾರ, ಅವರು ಅವರಮ್ಮನಲ್ಲಿಗೆ ಹೊರಡಬೇಕು ತಾನೇ?

ಮರು ಮಾತನಾಡದೆ ಪತ್ನಿ ತನ್ನ ಸಾಮಾನುಗಳನ್ನು ಯಥಾ ಸ್ಥಾನದಲ್ಲಿರಿಸಿದಳು!

★★★

ಪತ್ನಿ: ನಾನು ನಿಮಗಾಗಿ ಸಂಪೂರ್ಣ ಜಗತ್ತಿನ ಜೊತೆ ಜಗಳವಾಡ ಬಲ್ಲೆ.

ಪತಿ: ಆದರೆ ನೀನು ಯಾವಾಗಲೂ ನನ್ನ ಜೊತೆಯೇ ಹೆಚ್ಚು ಜಗಳವಾಡುತ್ತಿರುವೆ...?

ಪತ್ನಿ: ಹೌದು, ನೀವೇ ತಾನೆ ನನ್ನ ಪ್ರಪಂಚ!

★★★

ಶ್ರೀಮಂತ: ನನ್ನ ಬಳಿ ಗಾಡಿ ಇದೆ, ಬಂಗಲೆ ಇದೆ, ನೌಕರರಿದ್ದಾರೆ, ಫಾರ್ಮ್ ಹೌಸ್ ಇದೆ, ನಿನ್ನ ಬಳಿ ಏನಿದೆ?

ಬಡವ: ನನ್ನ ಬಳಿ ಒಬ್ಬ ಮಗನಿದ್ದಾನೆ ಮತ್ತವನ ಜೊತೆ ನಿನ್ನ ಏಕ ಮಾತ್ರ ಮಗಳಿದ್ದಾಳೆ...!

(ಸಂಗ್ರಹ) **ರಮಣ್ ಶೆಟ್ಟಿ ರೆಂಜಾಳ್, ಮುಂಬೈ**







A Boon for Childless Couple....!!!

SUCCESS
Dr. Padmaja
FERTILITY (IVF) CENTRE

**Surrogacy**

(To engage other women's womb to carry a baby to term)



*Women without uterus by birth, removed for any reasons, Malformed in Shape & size, Recurrent Abortions, Failure of Multiple IVF Cycles, Cancer, Cardiac, Renal, Spinal Injury, Neurological problems or a single male intending parent may need* ***SURROGACY.!!!***

- Surrogates live in campus till delivery
- Surrogates readily available - No waiting time
- Good Reliable Donors - best Results
- Reasonable cost packages
- No Hidden Costs & Legal Risks
- One of the best centres in south India

*A fruitful service with a smile - affordable to all...*

**All Infertility, Diagnostic & Correctional Procedures.**
**HSG, Laparoscopy, Hysteroscopy, TESA, PESA etc.**

**Dr. PADMAJA FERTILITY CENTRE**

Off: NGRI Metro Station, St. No. 7, Habsiguda, Hyderabad

Call Us
+91 7661 017755
+91 7661 086644
+91 7661 058800

www.drpadmajasurrogacy.com
www.drpadmajaivf.com